ದಿನಾಂಕ: 13.01.2017 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : 1ನೇ ಪ್ರತಿವಾದಿ ಪರ ಶ್ರೀ ಎಂ.ಆರ್. ವಕೀಲರವರಿಂದ :

1. ಯಾವ ವಿಚಾರಕ್ಕಾಗಿ ನಾನು ಈ ದಾವೆಯನ್ನು ಹಾಕಿದ್ದೇನೆ ಎಂದರೆ ನನ್ನ 2 ಅಡಿ ಒತ್ತುವರಿಯಾಗಿದೆ. ಒತ್ತುವರಿಯಾಗಿರುವುದನ್ನು ಬಿಡಿಸಿಕೊಳ್ಳಲು ದಾವೆ ಹಾಕಿದ್ದೇನೆ. ನಾನು ಮನೆ ಕಟ್ಟುವ ಮುಂಚೆ ಲೈಸನ್ಸ್ ಪಡೆದಿದ್ದುಂಟೇ ಎಂದರೆ ಆ ಮನೆ ತುಂಬಾ ಹಿಂದಿನಿಂದ ಅಂದರೆ 80 ವರ್ಷಗಳಿಂದ ಇದೆ ಆದ್ದರಿಂದ ಲೈಸನ್ಸ್ ಬಗ್ಗೆ ಗೊತ್ತಿಲ್ಲ. 2ನೇ ಪ್ರತಿವಾದಿಯ ಆಸ್ತಿಯ ಅಳತೆ 19 x 22 ½ ಅಡಿಗಳು ಎಂದರೆ ಸರಿ. ಅಷ್ಟೇ ಅಲ್ಲದೇ 2ನೇ ಪ್ರತಿವಾದಿಯ ಹೆಂಡತಿಗೂ 19 x 22 ½ ಅಳತೆಯ ಇನ್ನೊಂದು ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ 1 ನೇ ಪ್ರತಿವಾದಿ ಕಛೇರಿಯಿಂದ ಲೈಸನ್ಸ್ ಪಡೆದು ಮನೆ ಕಟ್ಟುತ್ತಿದ್ದಾರೆ ಎಂದರೆ ಸುಳ್ಳು. ಆ ಲೈಸನ್ಸ್ ಪ್ರಕಾರ 2 ನೇ ಪ್ರತಿವಾದಿ ನಾಲ್ಕು ದಿಕ್ಕುಗಳಲ್ಲಿ ತಲಾ 1½ ಅಡಿಗಳ ಖಾಲಿ ಜಾಗ ಬಿಟ್ಟು ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿ. 2ನೇ ಪ್ರತಿವಾದಿ ತನಗೆ ಇರುವ ಜಾಗದಲ್ಲಿ ಲೈಸನ್ಸ್ ಪಡೆದು ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಕೋರ್ಟ್ ಕಮಿಷನರ್ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಪ್ರತಿವಾದಿ ತನ್ನ ಆಸ್ತಿಯ ನಾಲ್ಕು ದಿಕ್ಕುಗಳಲ್ಲಿ ತಲಾ 1½ ಅಡಿ ಖಾಲಿ ಜಾಗ ಬಿಟ್ಟು ಕಟ್ಟುತ್ತಿರುವುದು ನಿಜವೆಂದು ವರದಿ ಸಲ್ಲಿಸಿದ್ದಾರೆ ಎಂಬ ಸೂಚನೆಗೆ ನೇರವಾಗಿ ಉತ್ತರಿಸದೇ ಬೇರೆ ಉತ್ತರ ನೀಡಿದ್ದು ಸಾಕ್ಷಿಗೆ ಪ್ರಶ್ನೆಗೆ ನೇರವಾಗಿ ಉತ್ತರಿಸಿ ಎಂದು ಹೇಳಿದ ನಂತರ ಸೂಚನೆ ಸುಳ್ಳು ಎಂದು ಹೇಳಿದ್ದಾರೆ. ಕಮಿಷನರ್ ಬಂದಾಗ ನಾನು ಸ್ಥಳದಲ್ಲಿದ್ದು ಅವರು ಮಾಡಿದ ಮಹಜರ್ ಸಹಿ ಹಾಕಿದ್ದೆ ಎಂದರೆ ಸರಿ. 1ನೇ ಪ್ರತಿವಾದಿ ಶಾಮೀಲಾಗಿ 2 ನೇ ಪ್ರತಿವಾದಿಗೆ ಲೈಸನ್ಸ್ ಕೊಟ್ಟಿಲ್ಲ ಕಾನೂನು ಪ್ರಕಾರವೇ ಲೈಸನ್ಸ್ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಲೈಸನ್ಸ್ ಪ್ರಕಾರವೇ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ.

2ನೇ ಪ್ರತಿವಾದಿ ಪರ ಪಾಟೀ ಸವಾಲು ಸಮಯ ಕೋರಿದ್ದು ಮುಂದೂಡಿತು.

ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸಾ ಸ ಇ ಎ ಒ

(ಮಧುಸೂಧನ ಡಿ.ಕೆ)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಯಳಂದೂರು.